UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Tuesday
02-06-2026

170ಕ್ಕೂ ಅಧಿಕ ಮಳಿಗೆಗಳ ಪ್ರಾರಂಭ | ರಾಸಾಯನಿಕಮುಕ್ತ ಹಣ್ಣುಗಳ ಮಾರಾಟಕ್ಕೆ ಮಾತ್ರ ಅವಕಾಶ

ಲಾಲ್‌ಬಾಗ್‌ನಲ್ಲಿ ಗುರುವಾರದಿಂದ ಮಾವು- ಹಲಸು ಮೇಳ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ಹಾಗೂ ತೋಟಗಾರಿಕೆ ಇಲಾಖೆ ಸಹಯೋಗದಲ್ಲಿ ಲಾಲ್‌ಬಾಗ್‌ನಲ್ಲಿ ಜೂನ್ 4ರಿಂದ 30ರವರೆಗೆ ಮಾವು ಮತ್ತು ಹಲಸು ಮೇಳ - 2026 ಆಯೋಜಿಸಿದೆ.

ಮೇಳಕ್ಕೆ ಜೂ.4ರಂದು ಬೆಳಗ್ಗೆ 11 ಗಂಟೆಗೆ ಚಾಲನೆ ದೊರೆಯಲಿದೆ. ಈ ಮೂಲಕ ರೈತರಿಗೆ ಮಾರಾಟಕ್ಕೆ ಉತ್ತಮ ವೇದಿಕೆ ಕಲ್ಪಿಸಲಾಗಿದ್ದು, ಇದರಿಂದಿಗೆ ಮಧ್ಯವರ್ತಿಗಳ ಹಾವಳಿಯಿಲ್ಲದೆ ರೈತರಿಂದ ನೇರವಾಗಿ ಗ್ರಾಹಕರಿಗೆ ರಾಸಾಯನಿಕ ಮುಕ್ತ ಮಾವು ರಿಯಾಯಿತಿ ದರದಲ್ಲಿ ದೊರೆಯಲಿದೆ ಎಂದು ನಿಗಮದ ಅಧ್ಯಕ್ಷ ಡಾ. ಬಿ.ಸಿ. ಮುದ್ದುಗಂಗಾಧರ್ ಸುದ್ದಿಗೋಷ್ಠಿಯಲ್ಲಿ ಸೋಮವಾರ ತಿಳಿಸಿದರು.

ಮೇಳದಲ್ಲಿ 170ಕ್ಕೂ ಅಧಿಕ ಮಾವು ಮಾರಾಟ ಮಳಿಗೆಗಳು ಹಾಗೂ 17ಕ್ಕೂ ಹೆಚ್ಚು ಹಲಸು ಮಾರಾಟ ಮಳಿಗೆಗಳನ್ನು ತೆರೆಯಲಾಗುವುದು. ಹಿಮಾಮ್‌ಪಸಂದ್, ಕೇಸರ್, ಖುಗರ್ ಬೇಬಿ, ದಶೇರಿ ಸೇರಿ 18-20 ಮಾವಿನ ತಳಿಗಳು, ಶಿವರಾತ್ರಿ, ರುದ್ರಾಕ್ಷಿ, ಏಕದಶಿ, ಲಾಲ್‌ಬಾಗ್ ಮಧುರ ಸೇರಿ 7 ವಿವಿಧ ಬಗೆಯ ಹಲಸಿನ ತಳಿಗಳು ಮೇಳದಲ್ಲಿ ಮಾರಾಟವಾಗಲಿವೆ. ಇದಲ್ಲದೆ, 65ಕ್ಕೂ ಹೆಚ್ಚು ಮಾವು ಮತ್ತು 15ಕ್ಕೂ ಹೆಚ್ಚು ಹಲಸು ತಳಿಗಳನ್ನು ಪ್ರದರ್ಶಿಸಲಾಗುವುದು ಎಂದರು.

ರಾಸಾಯನಿಕಮುಕ್ತ ಹಣ್ಣು: ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ದಕ್ಷಿಣ, ತುಮಕೂರು, ಮಂಡ್ಯ, ಕೊಪ್ಪಳ, ಧಾರವಾಡ, ಬೆಂಗಳೂರು ಗ್ರಾಮಾಂತರ ಹಾಗೂ ಹಾಸನ ಜಿಲ್ಲೆಗಳ ರೈತರು ಮೇಳದಲ್ಲಿ ಭಾಗವಹಿಸಲಿದ್ದಾರೆ. ರಾಸಾಯನಿಕ ಮುಕ್ತ ಹಣ್ಣನ್ನೇ ಮಾರಾಟ ಮಾಡುವಂತೆ ರೈತರಿಗೆ ಸೂಚಿಸಲಾಗಿದ್ದು, ಈ ಸಂಬಂಧ ಪರಿಶೀಲನೆಗೆ ಸಮಿತಿಯನ್ನೂ ರಚಿಸಲಾಗಿದೆ ಎಂದು ತಿಳಿಸಿದರು.

150 ಟನ್ ಅಧಿಕ ಮಾವು: ನಿಗಮದ ವ್ಯವಸ್ಥಾಪಕ ನಿರ್ದೇಶಕ ಟಿ.ಆರ್. ವೇದಮೂರ್ತಿ ಮಾತನಾಡಿ, ಈ ಬಾರಿ ಮಳೆಯಿಂದಾಗಿ ನಿರೀಕ್ಷಿತ ಪ್ರಮಾಣದಲ್ಲಿ ಇಳುವರಿ ಬಂದಿಲ್ಲ. ಆದಾಗ್ಯೂ ಮೇಳದಲ್ಲಿ 150 ಟನ್‌ಗೂ ಅಧಿಕ ಮಾವು ಮತ್ತು 10-15 ಟನ್‌ಗೂ ಅಧಿಕ ಹಲಸು ಮಾರಾಟವಾಗುವ ನಿರೀಕ್ಷೆಯಿದೆ. ಸುಮಾರು. 1.8 ಕೋಟಿಗೂ ಅಧಿಕ ವಹಿವಾಟು ನಡೆಯುವ ಸಾಧ್ಯತೆಯಿದೆ ಎಂದು ಹೇಳಿದರು.

ಮಾವು ಬೆಳೆ ವ್ಯಾಪ್ತಿ ಹೆಚ್ಚಳ: ಮಾವು ಬೆಳೆಯುವ ರೈತರಿಗೆ ಸರಕಾರದಿಂದ ಆಗತ್ಯ ನೆರವು ಸಿಗುತ್ತಿದ್ದು, ಮಾವು ಬೆಳೆ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದ್ದು, ಕಳೆದ ವರ್ಷ 1.39 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದ್ದು, ಇದೀಗ 1.45 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಪ್ರದೇಶವನ್ನು ಹೊಂದಿದೆ. ಆದರೆ ಪ್ರಸಕ್ತ ಹಂಗಾಮಿನಲ್ಲಿ ಹವಾಮಾನ ವೈಪರೀತ್ಯದಿಂದಾಗಿ ಮಾವಿನ ಇಳುವರಿಕೆ ಕಡಿಮೆಯಾಗಿದೆ ಎಂದರು.

83 ಟನ್ ಹಣ್ಣು ರಫ್ತು: ಮಾಡಿಕೆರೆ ಮಾವು ಅಭಿವೃದ್ಧಿ ಕೇಂದ್ರದ ವ್ಯಾಕ್‌ಹೌಸ್‌ನ ಮೂಲಕ ಪ್ರಸಕ್ತ ಸಾಲಿನಲ್ಲಿ 85 ಟನ್ ಮಾವಿನ ಹಣ್ಣನ್ನು ಉಪಚರಿಸಿ ರಫ್ತುದಾರರ ಮೂಲಕ ಅಮೆರಿಕ, ಜರ್ಮನಿ, ಯುಕೆ, ಐರ್‌ಲೆಂಡ್, ಲಂಡನ್ ರಾಷ್ಟ್ರಗಳಿಗೆ ರಫ್ತಾಗಿದೆ. ಜೂನ್ ತಿಂಗಳಲ್ಲಿ ಒಂದಿಷ್ಟು ರಫ್ತು ಪ್ರಕ್ರಿಯೆ ನಡೆಯಲಿದ್ದು, 100 ಟನ್ ದಾಟಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ತೋಟಗಾರಿಕೆ ಇಲಾಖೆ ಅಪರ ನಿರ್ದೇಶಕ ಡಾ. ಎಂ. ಜಗದೀಶ್ ಇತರರಿದ್ದರು.



ಮಿಯಾಝಾಕಿ ಮಾವು, ವಿಯಟ್ನಾಂ ಹಲಸು ನೇರ ನಾನಾ ವಿದೇಶಿ ತಳಿಗಳ ಬಗ್ಗೆ ಕೆಲವು ನರ್ಸರಿಗಳು ಫಸಲಿನ ಬಗ್ಗೆ ವೈಭವೀಕರಿಸುವ ಮೂಲಕ ರೈತರಲ್ಲಿ ಗೊಂದಲ ಮೂಡಿಸುತ್ತಿದ್ದಾರೆ. ಸಸಿಗಳನ್ನು ದುಬಾರಿ ದರಕ್ಕೆ ಮಾರುತ್ತಿದ್ದಾರೆ. ಹೀಗಾಗಿ ಹಣ್ಣಿನ ಸಸಿ ಮಾರಾಟ ಮಾಡುವ ನರ್ಸರಿಗಳಿಗೆ ನೀತಿ ಜಾರಿಗೆ ತರಲು ಸರಕಾರಕ್ಕೆ ಮನವಿ ಸಲ್ಲಿಸಲಾಗುವುದು. ರೈತರು ಈ ಬಗ್ಗೆ ಎಚ್ಚರ ವಹಿಸಬೇಕು.

| ಇಬ್ರಾಹಿಂ ಮೈಗೂರ
ತೋಟಗಾರಿಕೆ ಇಲಾಖೆ ನಿರ್ದೇಶಕ

ಲಾಲ್‌ಬಾಗ್ ಪ್ರವೇಶಕ್ಕೆ ಶುಲ್ಕ

ಮೇಳಕ್ಕೆ ಬರುವ ಗ್ರಾಹಕರು ಲಾಲ್‌ಬಾಗ್ ಒಳಪ್ರವೇಶ ಮಾಡಲು ಟಿಕೆಟ್ ಪಡೆಯಬೇಕು. (ವಯಸ್ಕರಿಗೆ 50, ಮಕ್ಕಳಿಗೆ 30 ರೂ., ಶಾಲಾ ಸಮವಸ್ತ್ರದಲ್ಲಿ ಬರುವ 10ನೇ ತರಗತಿಯೊಳಗಿನ ಮಕ್ಕಳಿಗೆ ಉಚಿತ ಪ್ರವೇಶ.) ಆದರೆ ಮೇಳಕ್ಕೆ ಪ್ರತ್ಯೇಕ ಶುಲ್ಕವಿಲ್ಲ. ಮೇಳವು ಬೆಳಗ್ಗೆ 6 ರಿಂದ ಆರಂಭವಾಗಲಿದ್ದು, ಸಂಜೆ 7ರವರೆಗೆ ನಡೆಯಲಿದೆ.

Vijayavani pg 03, 05

ಕನ್ನಡ ದಿನಪತ್ರಿಕೆ

ಜಿಕೆವಿಕೆಯಲ್ಲಿ ವಿಶ್ವ ಕ್ಷೀರ ದಿನ ಆಯೋಜನೆ

ಬೆಂಗಳೂರು: ಗ್ರಾಮೀಣರ ಬದುಕಿಗೆ ಆರ್ಥಿಕ ಆಧಾರವಾಗಿರುವ ಹೈನುಗಾರಿಕೆಯಲ್ಲಿ ಮಹಿಳೆಯರ ಪಾತ್ರ ಹಾಗೂ ಅವರ ಶ್ರಮ ಹಿರಿದಾಗಿದ್ದು, ಆರ್ಥಿಕ ಚಟುವಟಿಕೆಗೂ ಸಹಕಾರಿಯಾಗಿದೆ ಎಂದು ಬೆಂಗಳೂರು ಕೃಷಿ ವಿವಿಯ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ (ಎಟಿಐಸಿ) ಮುಖ್ಯಸ್ಥ ಡಾ. ಕೆ.ಪಿ. ರಘುಪ್ರಸಾದ್ ಹೇಳಿದ್ದಾರೆ

■ ಎಟಿಐಸಿ ಮುಖ್ಯಸ್ಥ ಡಾ. ರಘುಪ್ರಸಾದ್ ಭಾಗಿ

ಕೃಷಿ ವಿವಿ ಕ್ಯಾಂಪಸ್ ಜಿಕೆವಿಕೆಯಲ್ಲಿ ಸೋಮವಾರ ಆಯೋಜಿಸಿದ್ದ ವಿಶ್ವ ಕ್ಷೀರ ದಿನ ಉದ್ಘಾಟಿಸಿ ಮಾತನಾಡಿದರು. ಸಮಗ್ರ ವ್ಯವಸಾಯದ ಭಾಗವಾಗಿರುವ ಹೈನುಗಾರಿಕೆ ರೈತರ ಆದಾಯ ವೃದ್ಧಿಸುವಲ್ಲಿ ಸಫಲತೆ ಕಂಡಿದೆ. ಹೈನೋತ್ಪನ್ನ ವಿಸ್ತರಣೆ ಹಾಗೂ ಹಾಲು ಉತ್ಪಾದನೆಗೆ ಒತ್ತು ನೀಡುವ ಹಿನ್ನೆಲೆಯಲ್ಲಿ 2001ರ ಜೂ.1ರಂದು ವಿಶ್ವಸಂಸ್ಥೆಯು ಕ್ಷೀರ ದಿನ ಆಚರಿಸಲು ಆರಂಭಿಸಿತು. ನಂತರದಲ್ಲಿ ಹೈನೋದ್ಯಮಕ್ಕೆ ಬೆಂಬಲ ನೀಡಲು ಪ್ರತಿವರ್ಷ ತಪ್ಪದೇ ಜಾಗೃತಿ ಕಾರ್ಯಕ್ರಮಗಳನ್ನು ಆಚರಿಸುತ್ತ ಬರಲಾಗಿದೆ ಎಂದರು.

ಹಾಲಿನಲ್ಲಿರುವ ಪೌಷ್ಟಿಕಾಂಶದ ಬಗ್ಗೆ ಕರ್ನಾಟಕದಲ್ಲಿ ಇನ್ನಷ್ಟು ಮಾಹಿತಿ ನೀಡಿ ಡೇರಿ ಕ್ಷೇತ್ರವನ್ನು ಸಶಕ್ತಗೊಳಿಸಬೇಕು ಎಂದು ಡಾ. ರಘುಪ್ರಸಾದ್ ವಿವರಿಸಿದರು,

ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆಯ ಮುಖ್ಯಸ್ಥೆ ಡಾ. ಭಾರತಿ ಸಿ. ಮಿರಜಕರ ಮಾತನಾಡಿ, ಡೇರಿ ಉತ್ಪನ್ನಗಳು ಹಾಗೂ ಹೈನೋದ್ಯಮದಿಂದ ಸ್ಥಳೀಯ ಆರ್ಥಿಕತೆ ಮತ್ತು ಸಮುದಾಯಗಳಿಗೆ ಆಗುವ ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸಬೇಕಿದೆ ಎಂದು ಸಲಹೆ ನೀಡಿದರು. ಡೇರಿ ವಿಜ್ಞಾನ ಕಾಲೇಜಿನ ಹೈನುಗಾರಿಕೆ ತಂತ್ರಜ್ಞಾನ ವಿಭಾಗದ ಸಹ ಪ್ರಾಧ್ಯಾಪಕಿ ಡಾ. ಹರಿಣಿ ವೇಣುಗೋಪಾಲ್ ಇತರರಿದ್ದರು.



ಗಾಂಧಿ ಕೃಷಿವಿಜ್ಞಾನ ಕೇಂದ್ರದಲ್ಲಿ ಸೋಮವಾರ ಆಯೋಜಿಸಿದ್ದ ವಿಶ್ವ ಕ್ಷೀರ ದಿನ ಕಾರ್ಯಕ್ರಮವನ್ನು ಎಟಿಐಸಿ ಮುಖ್ಯಸ್ಥ ಡಾ. ಕೆ.ಪಿ. ರಘುಪ್ರಸಾದ್ ಉದ್ಘಾಟಿಸಿದರು. ಡಾ. ಭಾರತಿ ಸಿ., ಡಾ. ಹರಿಣಿ ವೇಣುಗೋಪಾಲ್ ಮತ್ತಿತರರು ಉಪಸ್ಥಿತರಿದ್ದರು.

'ಆಹಾರ ಭದ್ರತೆಯಲ್ಲಿ ಹಾಲು ಮಹತ್ವದ್ದು'

ಜಿಕೆವಿಕೆಯಲ್ಲಿ ವಿಶ್ವ ಹಾಲು ದಿನಾಚರಣೆಗೆ ಡಾ.ಕೆ.ಪಿ.ರಘುಪ್ರಸಾದ್ ಚಾಲನೆ

■ ಉದಯವಾಣಿ ಸಮಾಚಾರ

ಬೆಂಗಳೂರು: ಹಾಲಿನ ಪೌಷ್ಟಿಕಾಂಶದ ಮೌಲ್ಯ ಹಾಗೂ ಡೇರಿ ಉದ್ಯಮದ ಸಾಮಾಜಿಕ, ಆರ್ಥಿಕ ಪ್ರಾಮುಖ್ಯತೆ ಮತ್ತು ಆಹಾರ ಭದ್ರತೆಯಲ್ಲಿ ಅದರ ಪಾತ್ರದ ಕುರಿತು ಜಾಗೃತಿ ಮೂಡಿಸುವುದು ಅಗತ್ಯ ಎಂದು ಸಹ ವಿಸ್ತರಣಾ ನಿರ್ದೇಶಕ ಡಾ. ಕೆ.ಪಿ.ರಘುಪ್ರಸಾದ್ ಹೇಳಿದರು.

ಜಿಕೆವಿಕೆಯ ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆ ವತಿಯಿಂದ ಆಯೋಜಿಸಿದ್ದ ವಿಶ್ವ ಹಾಲು ದಿನ-2026 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹಾಲನ್ನು ಡೇರಿ ಉದ್ಯಮವೆಂದು ಗುರುತಿಸಲು ಮತ್ತು ಇದರ ಪ್ರಯೋಜನಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಪ್ರತಿ ವರ್ಷ ಜೂ.1ರಂದು ವಿಶ್ವಹಾಲು ದಿನವನ್ನಾಗಿ ಆಚರಿಸಲಾಗುತ್ತದೆ. 2001ರಲ್ಲಿ ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಯು ಇದನ್ನು ಪ್ರಾರಂಭಿಸಿತು. ಜಾಗತಿಕ ಆಹಾರವಾಗಿ ಹಾಲಿನ ಮಹತ್ವವನ್ನು ಎಲ್ಲರಿಗೂ ತಿಳಿಸಲು, ಹೈನುಗಾರಿಕೆ ಉದ್ಯಮಕ್ಕೆ ಸಂಬಂಧಿಸಿದ ಚಟುವಟಿಕೆಗಳಿಗೆ ಬೆಂಬಲ ಹಾಗೂ ಅರಿವು ಮೂಡಿಸಲು ಪ್ರತಿವರ್ಷ ಈ ದಿನವನ್ನು ಆಚರಿಸಲಾಗುತ್ತಿದೆ ಎಂದರು.

ಜಾಗೃತಿ ಅಗತ್ಯ: 2026ರಲ್ಲಿ 'ಮಹಿಳಾ ರೈತರನ್ನು ಗೌರವಿಸುವುದು' ಎಂಬ ಧ್ಯೇಯ ವಾಕ್ಯದೊಂದಿಗೆ ಆಚರಿಸಲಾಗುತ್ತಿದೆ. ಹೈನುಗಾರಿಕೆ, ಕೃಷಿ, ಗ್ರಾಮೀಣ ಜೀವನೋಪಾಯ ಮತ್ತು ಆಹಾರ ಭದ್ರತೆಯಲ್ಲಿ ಮಹಿಳೆಯರ ಕೊಡುಗೆ ಅಪಾರ. ಈ ನಿಟ್ಟಿನಲ್ಲಿ ಅವರ ಕೊಡುಗೆಯನ್ನು ಸ್ಮರಿಸಿ ಶ್ಲಾಘಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಗತ್ತಿನಲ್ಲಿ ಡೇರಿ ಉತ್ಪನ್ನಗಳು ಬಳಕೆ, ಹಾಲಿನ ಪೌಷ್ಟಿಕಾಂಶದ ಮೌಲ್ಯದ ಕುರಿತು ಹೆಚ್ಚಿನ ಜಾಗೃತಿ ಮೂಡಿಸಬೇಕಿದೆ ಎಂದರು.

ಹೈನುಗಾರಿಕೆ ತಂತ್ರಜ್ಞಾನ ವಿಭಾಗದ ಸಹ ಪ್ರಾಧ್ಯಾಪಕಿ ಹರಿಣಿ ವೇಣುಗೋಪಾಲ್ ಮಾತನಾಡಿ, ಹಾಲು ಆರೋಗ್ಯಯುತ ಆಹಾರವಾಗಿದೆ. ಪ್ರತಿದಿನ ಹಾಲು ಸೇವಿಸುವುದರಿಂದ ನಮ್ಮ ದೇಹಕ್ಕೆ ಹಲವಾರು ಪ್ರಯೋಜನವಾಗಲಿದೆ. ಹಾಗಾಗಿ ಹಾಲಿನ ಮೌಲ್ಯವರ್ಧಿತ ಉತ್ಪನ್ನಗಳಾದ ಹಾಲು, ಬೆಣ್ಣೆ ತುಪ್ಪವನ್ನು ನಿತ್ಯ ಆಹಾರದಲ್ಲಿ ಬಳಸುವಂತೆ ಸಲಹೆ ನೀಡಿದರು.

ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆಯ ಮುಖ್ಯಸ್ಥೆ ಡಾ. ಭಾರತಿ ಸಿ. ಮಿರಜಕರ ಅವರು ವಿಶ್ವಹಾಲು ದಿನ ಆಚರಣೆ ಮಹತ್ವ ಹಾಗೂ ಹಾಲು ಉತ್ಪಾದನೆಯಿಂದ ಸ್ಥಳೀಯ ಆರ್ಥಿಕತೆ ಮತ್ತು ಸಮುದಾಯಗಳಿಗೆ ಆಗುವ ಪ್ರಯೋಜನಗಳ ಬಗ್ಗೆ ವಿವರಿಸಿದರು.



ವಿಶ್ವಹಾಲು ದಿನಾಚರಣೆಯನ್ನು ಡಾ. ಕೆ.ಪಿ.ರಘುಪ್ರಸಾದ್ ಉದ್ಘಾಟಿಸಿದರು.

Udayavani pg 02

ಬೆಳೆಯ ಆರೈಕೆ, ಗೊಬ್ಬರಕ್ಕೆ ಕೃಷಿ ಇಲಾಖೆಯಿಂದ ಕೈಪಿಡಿ

ಮೈಸೂರು ಕೃಷಿ ಇಲಾಖೆಯಿಂದ ವಿನೂತನ ಪ್ರಯತ್ನ | ಪೋಷಕಾಂಶಗಳ ನಿರ್ವಹಣೆ ಕುರಿತು ಮಾಹಿತಿ ಪುಸ್ತಕ

■ ಸತೀಶ್ ದೇಪುರ

ಉದಯವಾಣಿ ಸಮಾಚಾರ

ಮೈಸೂರು: ಇಡೀ ರಾಜ್ಯದಲ್ಲೇ ಮೈಸೂರು ಕೃಷಿ ಇಲಾಖೆ ವಿನೂತನ ಪ್ರಯತ್ನಕ್ಕೆ ಕೈ ಹಾಕಿದ್ದು ರೈತರು ಬಿತ್ತನೆ ಮಾಡಿದ ಬೆಳೆಗಳಿಗೆ ಅಗತ್ಯವಿರುವ ರಸಗೊಬ್ಬರ, ಆರೈಕೆ ಸೇರಿದಂತೆ ಪೋಷಕಾಂಶಗಳ ನಿರ್ವಹಣೆ ಕುರಿತ ಕೈಪಿಡಿ ಹೊರತಂದಿದೆ.

ಸಾಮಾನ್ಯವಾಗಿ ರೈತರು, ರಸಗೊಬ್ಬರ ಮಾರಾಟಗಾರರು ಅನುಭವಿಸುವ ಮಾಹಿತಿ ಕೊರತೆಯನ್ನು ಗಮನದಲ್ಲಿರಿಸಿಕೊಂಡ ಮೈಸೂರು ಕೃಷಿ ಇಲಾಖೆ, ಇದೇ ಮೊದಲ ಬಾರಿಗೆ ಯಾವ್ಯಾವ ಬೆಳೆಗೆ, ಎಷ್ಟು ಪ್ರಮಾಣದ, ಯಾವ ಗೊಬ್ಬರ ಮತ್ತು ಪೋಷಕಾಂಶ ನೀಡಬೇಕು ಜತೆಗೆ ಬೆಳೆಗಳ ನಿರ್ವಹಣಾ ಕ್ರಮ ಹೇಗಿರಬೇಕು ಎಂಬುದರ ಪಟ್ಟಿಯನ್ನು ಪ್ರಕಟಿಸಿದೆ.

ಪ್ರತಿ ಬೆಳೆಯ ಆರಂಭದಲ್ಲಿ ಮಣ್ಣಿನ ಪರೀಕ್ಷೆ ಮಾಡಿಸಿ, ಮಣ್ಣಿನ ಫಲವತ್ತತೆ ಹೆಚ್ಚಿಸಲು ಕಾಂಪೋಸ್ಟ್, ಎರೆಹುಳು ಗೊಬ್ಬರ ಮತ್ತು ಹಸಿರೆಲೆ ಗೊಬ್ಬರಗಳನ್ನು ಬಳಸುವುದು, ಮಣ್ಣಿನ ತೇವಾಂಶ ಕಾಪಾಡಿಕೊಳ್ಳಲು ಹನಿ ನೀರಾವರಿ ಅಥವಾ ತುಂತುರು ನೀರಾವರಿ ಪದ್ಧತಿ ಅಳವಡಿಸಿಕೊಳ್ಳುವುದು, ಕಳೆಗಳು ಬೆಳೆಗೆ ಸಿಗಬೇಕಾದ ಪೋಷಕಾಂಶ ಮತ್ತು ನೀರನ್ನು ಕಸಿದುಕೊಳ್ಳುತ್ತವೆ. ಹೀಗಾಗಿ ನಿಯಮಿತವಾಗಿ ಕಳೆಗಳನ್ನು ತೆಗೆಯುವುದು, ಕೃಷಿ ತಜ್ಞರ ಸಲಹೆಯ ಮೇರೆಗೆ ಕೀಟ ಮತ್ತು ರೋಗ ನಿರ್ವಹಣೆಗಾಗಿ ಔಷಧ ಸಿಂಪಡಿಸುವುದು ಸೇರಿದಂತೆ ಬಿತ್ತನೆ ಸಂದರ್ಭ ಹಾಗೂ ನಂತರದ ದಿನಗಳಲ್ಲಿ ರಸಗೊಬ್ಬರವನ್ನು ಯಾವ ಬೆಳೆಗೆ, ಯಾವ್ಯಾವ ಪ್ರಮಾಣದಲ್ಲಿ ನೀಡಬೇಕೆಂಬ ಅಗತ್ಯವುಳ್ಳ ಮಾಹಿತಿಯನ್ನು ಕೃಷಿ ಇಲಾಖೆ ಪ್ರಕಟಿಸಿದೆ.

ರೈತರಿಗೆ ಪ್ರಯೋಜನಕಾರಿ: ನಾಟಿ ಸಮಯದಲ್ಲಿ ಬಿತ್ತಿದ ಬೆಳೆಗೆ ಯಾವ ಪ್ರಮಾಣದಲ್ಲಿ ಮೂಲಗೊಬ್ಬರವಾದ ಯೂರಿಯಾ, ಎಸ್‌ಎಸ್‌ಪಿ, ಎಂಒಪಿ ಎಷ್ಟು ಪ್ರಮಾಣದಲ್ಲಿ ನೀಡುವುದು, 6, 10, 14ನೇ ವಾರಕ್ಕೆ ಯಾವ ಗೊಬ್ಬರ ಎಷ್ಟು ಪ್ರಮಾಣದಲ್ಲಿ ಎಕರೆಗೆ ನೀಡಬೇಕೆಂಬುದನ್ನು ನಮೂದಿಸಲಾಗಿದೆ. ಇದು ರೈತರಿಗೆ ಪ್ರಯೋಜನಕಾರಿಯಾಗಿದ್ದು ಮಾರ್ಗಸೂಚಿಯಂತೆ ಬೆಳೆಯಲ್ಲಿ ಪೋಷಕಾಂಶ ನಿರ್ವಹಣೆ ಮಾಡಿದಲ್ಲಿ ಉತ್ತಮ ಇಳುವರಿ ಪಡೆಯಬಹುದಾಗಿದೆ.

9 ಬೆಳೆಗಳಿಗೆ ಕೈಪಿಡಿ: ಜಿಲ್ಲೆಯ ಪ್ರಧಾನ ಬೆಳೆಗಳಾದ ಕಬ್ಬು, ಭತ್ತ, ರಾಗಿ, ಮೆಕ್ಕೆಜೋಳ, ಹತ್ತಿ, ಸೂರ್ಯಕಾಂತಿ, ಅಲಸಂದೆ, ಅವರೆ, ಹೆಸರು ಮತ್ತು ಉದ್ದು ಬೆಳೆಗಳಲ್ಲಿ ನೀರು ಮತ್ತು ಪೋಷಕಾಂಶ ನಿರ್ವಹಣೆ ಬಗ್ಗೆ ಸಮಗ್ರ ಮಾಹಿತಿ ಒದಗಿಸಿದ್ದು ನಿಗದಿತ ಅವಧಿಗೆ ಬೇಕಿರುವ ರಸಗೊಬ್ಬರ ಮತ್ತು ಅದರ ಪ್ರಮಾಣವನ್ನು ನಮೂದಿಸಲಾಗಿದೆ.



> ರೈತರು ಮತ್ತು ರಸಗೊಬ್ಬರ ಮಾರಾಟಗಾರರಿಗೆ ಅನುಕೂಲವಾಗುವ ದೃಷ್ಟಿಯಿಂದ ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆ ಕುರಿತು ಮಾಹಿತಿ ಪುಸ್ತಕ (ಕೈಪಿಡಿ) ಪ್ರಕಟಿಸಲಾಗಿದೆ. ಜತೆಗೆ ಗೊಬ್ಬರ ಮಾರಾಟಗಾರರು ಮತ್ತು ರೈತ ಕೇಂದ್ರ, ಇಲಾಖೆ ಕಚೇರಿಗಳಿಗೆ ತಲುಪಿಸುವ ಕೆಲಸ ಮಾಡಲಾಗಿದೆ.
> ● ಕೆ.ಎಚ್.ರವಿ, ಜಂಟಿ ಕೃಷಿ ನಿರ್ದೇಶಕ, ಮೈಸೂರು

ಅನುಕೂಲವೇನು?

ರೈತರು ರಸಗೊಬ್ಬರ ಖರೀದಿಗೆ ಅಂಗಡಿಗಳಿಗೆ ತೆರಳಿದಾಗ ಅಲ್ಲಿ ತಮಗೆ ಅಗತ್ಯವಿರುವ ರಸಗೊಬ್ಬರ ಇಲ್ಲದಿದ್ದಾಗ, ಬದಲಿಯಾಗಿ ಯಾವ ರಸಗೊಬ್ಬರ ನೀಡಬೇಕು ಎಂಬ ಗೊಂದಲ ಮಾರಾಟಗಾರರಲ್ಲಿ ಉಂಟಾಗುತ್ತಿತ್ತು. ಪರ್ಯಾಯವಾಗಿ ಬೇರೊಂದು ಗೊಬ್ಬರ ನೀಡಿದರೂ ರೈತರು ಒಪ್ಪುತ್ತಿರಲಿಲ್ಲ. ಇದರಿಂದ ಗೊಂದಲ ಉಂಟಾಗುತ್ತಿತ್ತು. ಈಗ ಜಿಲ್ಲಾಡಳಿತದ ಸಹಯೋಗದಲ್ಲಿ ಕೃಷಿ ಇಲಾಖೆ ಹೊರತಂದಿರುವ ಮಾರ್ಗಸೂಚಿಯಂತೆ ಅಗತ್ಯವಿರುವ ಗೊಬ್ಬರ ಮತ್ತು ಪರ್ಯಾಯವಾಗಿ ಯಾವ ಗೊಬ್ಬರ ವಿತರಿಸಲು ಸುಲಭವಾಗಿದೆ. ಜಿಲ್ಲೆಯಲ್ಲಿ 1064 ಮಂದಿ ರಸಗೊಬ್ಬರ ಮಾರಾಟಗಾರರು ಇದ್ದು ಅವರ ಮಳಿಗೆಗಳಲ್ಲಿ ಮಾರ್ಗಸೂಚಿಯನ್ನು ಅಳವಡಿಸುವ ಜತೆಗೆ ರೈತ ಸಂಘಗಳು, ತಾಲೂಕು ಕಚೇರಿ ಹಾಗೂ ತಾಲೂಕು ಮತ್ತು ಹೋಬಳಿ ಮಟ್ಟದಲ್ಲಿರುವ ಇಲಾಖೆಯ ಕಚೇರಿ, ಕೃಷಿ ಪತ್ತಿನ ಸಹಕಾರ ಸಂಘಗಳಿಗೂ ಕೈಪಿಡಿ ಒದಗಿಸಲಾಗಿದೆ.

Udayavani pg 04

Amid West Asia turmoil, K'taka turns to US, UK mango markets

ASHWIN B M
BENGALURU, DHNS

Facing trade issues in traditional West Asian markets and crop losses at home, Karnataka's mango sector is shifting to Western markets, online sales and direct company tie-ups to help farmers get fair prices this season.

Due to flight cancellations and regional tensions in the Gulf, which is usually a major market for the state, Karnataka has instead exported over 183 tonnes of mangoes this year to the US, UK, Australia and Europe.

B C Muddugangadhar, chairman of the Karnataka State Mango Development and Marketing Corporation Ltd, told *DH*, that entering these premium markets requires strict safety checks. While shipments to Europe and the UK are moving smoothly, the US and Australia require "special treatment".

"The special treatment requires that after the mangoes are packed, they must go through gamma radiation at special centres to clear out any tiny insects before export," Muddugangadhar explained. He also clarified that Japan has not rejected Indian mangoes, they just want the same strict safety checks as in the US.

India is the world's largest producer of mangoes, contributing nearly 45% of global mango production. India produces nearly 25-26 million tonnes of mangoes annually. Karnataka ranked third in production (2025).

Uttar Pradesh is the leading mango-producing state in the country. Apart from Uttar Pradesh, states such as Andhra Pradesh, Bihar, Karnataka, Gujarat, Madhya Pradesh and Tamil Nadu are major contributors to India's mango economy.

"In the UK, people mostly eat thick-skinned mangoes from Mexico, Cuba or China, which do not have much taste," Muddugangadhar said.



STATE STANDING

- Rank in India: **3rd largest mango producer** (as of 2025)
- Total farming land: **1,45,000 hectares** (Increased by 6,000 hectares)

Total exported so far: **185 tonnes** (85 tonnes from govt centre, 100 tonnes from private groups)

- Main export countries: USA, UK, Germany, Ireland, Australia and the Netherlands
- Top growing districts: Kolar, Chikkaballapur, Ramanagara, Koppal and Tumakuru

Dec Hrd Pg 03

Lalbagh's mango and jackfruit mela returns from June 4



BC Muddugangadhar, Chairman, Karnataka State Mango Development Board (KSMDB); Ibrahim Maigur, Director, Department of Horticulture; TR Vedhamurthy, Managing Director, KSMDB; and M Jagadeesh, Additional Director of Horticulture, at the mela announcement.

BENGALURU, DHNS

Bengaluru's annual mango and jackfruit mela will be held at the Lalbagh Botanical Garden from June 4 to 30, offering citizens a wide range of naturally ripened fruits sourced directly from farmers across Karnataka.

Organised by the Karnataka State Mango Development and Marketing Corporation and the Department of Horticulture, the 27-day fair comes at a challenging time for growers. Unseasonal weather across the state has reduced yields and delayed harvesting this season.

Despite the setback, the government aims to eliminate middlemen and create a direct link between farmers and consumers.

"Our main goal is to provide buyers with naturally ripened, chemical-free fruits directly from farmers," said BC Muddugangadhar, Chairman of the Karnataka State Mango Development Board.

"This model ensures fair prices for growers while consumers get quality produce at reasonable rates."

To support growers, the board has allotted 168 stalls to mango farmers and 17 stalls to jackfruit farmers free of cost. Farmers from major fruit-growing districts, including Kolar, Chikkaballapur, Bengaluru Rural, Tumakuru, Mandya, Koppal and Dharwad, will participate in the mela.

In addition to fresh fruits, visitors can purchase a range of value-added products such as juices, jams, pickles, dried fruit slices, chips, pulp, candy and ice creams made from mangoes and jackfruit. The initiative is aimed at helping farmers increase their earnings through processed products.

The finest on display

The mela will showcase 65 varieties of mangoes and 15 varieties of jackfruit.

Around 18 to 20 popular mango varieties will be available for sale every day, including Badami and Ratnagiri Alphonso, Raspuri, Mallika, Sendura, Himam Pasand, Kesar, Sugar Baby, Dasheri, Baneshan, and Malgova.

Jackfruit enthusiasts can choose from seven local varieties, including Tubagere, Lalbagh Madhura, Rudrakshi, Shivaratri, Surya, and Chandra.

Dec Hrd Pg 05

El Nino concerns: Govt steps up measures to protect kharif crops

IMD predicts below-normal monsoon rainfall

AJITH ATHRADY
NEW DELHI, DHNS

With the India Meteorological Department (IMD) predicting a below-normal southwest monsoon at about 90% of the long-period average due to El Nino, the Centre on Monday said it has activated multiple *preparedness measures to protect kharif crops.*

The Agriculture Ministry has constituted a Crop Weather Watch Group that will meet every Monday to monitor rainfall patterns, sowing progress, reservoir levels, input availability, pest incidence, and price trends.



A busy day in a field as paddy transplantation begins across the region, near Amritsar, on Monday. PTI

A separate Crisis Management Group, comprising relief commissioners and state disaster management authorities, has also been set up. A comprehensive crisis management plan has been circulated to all state governments. States have been advised to maintain a seed reserve of at least one per cent, with special emphasis on short and medium-duration varieties.

The ministry is also preparing district-level contingency plans in coordination with the Indian Council of Agricultural Research (ICAR) and conducting regular video conferences with state officials.

"A crop weather watch group has been constituted and meets every Monday to study rainfall patterns, sowing progress, reservoir status, input availability, pest incidence and price trends," said Anupam Mishra, Additional Secretary, Food and Consumer Affairs Ministry.

Fertiliser availability

Fertiliser stocks are currently at 51% of the Kharif season requirement — significantly higher than the usual 33% buffer — thanks to advance procurement and better logistics.

Taking the El Nino outlook into account, the ministry has revised fertiliser demand estimates downward.

Domestic fertiliser production stood at 104.81 lakh tonnes post the West Asia crisis, with imports of 27.62 lakh tonnes, taking total additions to availability to approximately 132.43 lakh tonnes, said Aparna S Sharma, Additional Secretary, Fertiliser Ministry.

Urea demand for the 2026-27 kharif season has been pegged at 194 lakh tonnes.

Dec Hrd pg 04

ಅತಿ ರಾಸಾಯನಿಕದಿಂದ ಕೃಷಿ ರಕ್ಷಿಸಲು ಕೇಂದ್ರ ಕ್ರಮ

ರಾಷ್ಟ್ರವ್ಯಾಪಿ ಖೇತ್ ಬಚಾವೋ ಆರಂಭ

• **ರೈಸನ್(ಮ.ಪ್ರ.):** ಕೃಷಿ ಕ್ಷೇತ್ರ ಮತ್ತು ಭೂಮಿಯನ್ನು ಅತಿಯಾದ ರಾಸಾಯನಿಕದಿಂದ ಭೂಮಾತೆ ಮತ್ತು ಕೃಷಿಯನ್ನು ರಕ್ಷಿಸಿ ಹೊಲಗಳನ್ನು ಉಳಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರವು ಮಹತ್ವದ 'ಖೇತ್ ಬಚಾವೋ ಅಭಿಯಾನ'ವನ್ನು ಆರಂಭಿಸಿದ್ದು, ಕೇಂದ್ರ ಕೃಷಿ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ಅವರು ಸೋಮವಾರ ಮಧ್ಯಪ್ರದೇಶದ ರೈಸನ್ ಜಿಲ್ಲೆಯ ರಾಮಸಿಯಾ ಗ್ರಾಮದಲ್ಲಿ ಚಾಲನೆ ನೀಡಿದರು.

'ಖೇತ್ ಬಚಾವೋ ಅಭಿಯಾನ್' ಭೂಮಾತೆಯನ್ನು ರಕ್ಷಿಸುವ ರಾಷ್ಟ್ರೀಯ ಸಂಕಲ್ಪವಾಗಿದೆ. ಈ ಅಭಿಯಾನವು ಜೂ.1ರಿದ 30ರವರೆಗೆ ದೇಶಾದ್ಯಂತ ನಡೆಯಲಿದ್ದು, ಕೃಷಿ ವಿಜ್ಞಾನಿಗಳು, ಕೃಷಿ ವಿಶ್ವವಿದ್ಯಾಲಯಗಳ ತಜ್ಞರು, ಕೃಷಿ ವಿಜ್ಞಾನ ಕೇಂದ್ರ ಅಧಿಕಾರಿಗಳು, ಸಾರ್ವಜನಿಕ ಪ್ರತಿನಿಧಿಗಳು ಹಳ್ಳಿಗಳಿಗೆ ಭೇಟಿ ನೀಡಿ ರೈತರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಲಿದ್ದಾರೆ ಎಂದು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರಾಗಿರುವ ಚೌಹಾಣ್ ತಿಳಿಸಿದರು.

ಇದರಲ್ಲಿ ಸಮತೋಲಿತ ರಸಗೊಬ್ಬರ ಬಳಕೆ, ಮಣ್ಣಿನ ಪರೀಕ್ಷೆ, ಮಣ್ಣಿನ ಆರೋಗ್ಯ ಕಾರ್ಡ್‌ಗಳ ಬಳಕೆ, ನೈಸರ್ಗಿಕ ಕೃಷಿ, ಜಲಸಂರಕ್ಷಣೆ, ವೈಜ್ಞಾನಿಕ ಕೃಷಿ ವಿಧಾನಗಳ ಅನುಸರಣೆಯನ್ನು ಉತ್ತೇಜಿಸುವ ಉದ್ದೇಶ ಹೊಂದಲಾಗಿದೆ.''ಈ ಭೂಮಿ ನಮ್ಮ ತಾಯಿ ಮತ್ತು ಭೂಮಿಯ ಆರೋಗ್ಯ ರಕ್ಷಿಸುವುದು ನಮ್ಮೆಲ್ಲರ ಸಮಗ್ರ ಹೊಣೆಗಾರಿಕೆ. ಮಣ್ಣಿನ ರಕ್ಷಣೆಯಾದರೆ , ಕೃಷಿ ಅಭಿವೃದ್ಧಿ ಹೊಂದುತ್ತದೆ. ರೈತರು ಬಲಿಷ್ಠರಾಗುತ್ತಾರೆ ಮತ್ತು ರಾಷ್ಟ್ರವೂ ಅಭಿವೃದ್ಧಿ ಹೊಂದುತ್ತದೆ ಎಂದು ಅವರು ವಿವರಿಸಿದರು.



ರೈತರಿಗೆ ಮನವಿ: ಅವ್ಯಾಹತವಾಗಿ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಬಳಸಬೇಡಿ. ಬದಲಿಗೆ ವೈಜ್ಞಾನಿಕ ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ಮಣ್ಣಿನ ವಾಸ್ತವಿಕ ಅಗತ್ಯಗಳಿಗೆ ತಕ್ಕಂತೆ ಗೊಬ್ಬರ ಬಳಸಿ ಎಂದು ಅವರು ರೈತರಿಗೆ ಮನವಿ ಮಾಡಿಕೊಂಡರು. ಭವಿಷ್ಯದ ಪೀಳಿಗೆಯ ಉಜ್ವಲ ಭವಿಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡ ಒಬ್ಬ ದೂರದೃಷ್ಟಿಯ ನಾಯಕನಾಗಿ ಪ್ರಧಾನಿ ನರೇಂದ್ರ ಮೋದಿಯವರು ಈ ಮಹತ್ವಾಕಾಂಕ್ಷಿ ಯೋಜನೆಯನ್ನು ರೂಪಿಸಿದ್ದಾರೆ ಎಂದರು.

ಅತಿಯಾದ ರಾಸಾಯನಿಕಗಳ ಬಳಕೆಯಿಂದ ಮಣ್ಣಿನ ಫಲವತ್ತತೆ ಕುಸಿಯುತ್ತದೆ. ಇದರಿಂದಾಗಿ ಮಣ್ಣಿನಲ್ಲಿ ಅಗತ್ಯವಾಗಿ ಇರಬೇಕಾದ ಅಸಂಖ್ಯಾತ ಸೂಕ್ಷ್ಮ ಜೀವಿಗಳ ನಾಶವಾಗುತ್ತದೆ. ಇದರಿಂದ ಕೃಷಿ ಉತ್ಪಾದನೆಯ ಮೇಲೆ ನೇರ ಪರಿಣಾಮ ಬೀರಿ ಕೃಷಿ ವೆಚ್ಚವನ್ನು ಹೆಚ್ಚುವಂತೆ ಮಾಡುತ್ತದೆ ಎಂದು ಅವರು ಒತ್ತಿ ಹೇಳಿದರು. ಈ ಅಭಿಯಾನದ ವೇಳೆ ಮಣ್ಣಿನ ಪರೀಕ್ಷೆ ಮಾಡಿಸಿಕೊಳ್ಳುವ ಬಗ್ಗೆ, ಸಮತೋಲಿತ ಪೋಷಕಾಂಶ ನಿರ್ವಹಣೆ, ನೈಸರ್ಗಿಕ ಕೃಷಿ, ಆಧುನಿಕ ಬತ್ತನೆ ತಂತ್ರಗಳು , ಜಲಸಂರಕ್ಷಣೆ ಮತ್ತು ಆಧುನಿಕ ಕೃಷಿ ಪದ್ಧತಿಗಳ ಅನುಸರಣೆಯ ಬಗ್ಗೆ ರೈತರಲ್ಲಿ ಅರಿವು ಮೂಡಿಸಲಾಗುವುದು ಎಂದರು.

Hosadiganta pg 10

ಪ್ರತಿಭಟನೆ ನಡುವೆ ಕೃಷಿ ಪರೀಕ್ಷೆ

ಹಿರಿಯೂರಿನ ಬಬ್ಬೂರು ಫಾರಂ ತೋಟಗಾರಿಕೆ ಕಾಲೇಜಿನಲ್ಲಿ ನಡೆದ ಎಕ್ಸ್ಾಂ

ಹಿರಿಯೂರು (ಚಿತ್ರದುರ್ಗ): ತಾಲೂಕಿನ ಬಬ್ಬೂರು ಫಾರಂ ಸಮೀಪದ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ಸೋಮವಾರ ನಡೆದ ಕೃಷಿ ಪ್ರಾಯೋಗಿಕ ಮರು ಪರೀಕ್ಷೆ ರದ್ದು ಪಡಿಸಿ, ಈ ಹಿಂದಿನ ಪರೀಕ್ಷೆ ಫಲಿತಾಂಶವನ್ನೇ ಪರಿಗಣಿಸ ಬೇಕು ಎಂದು ಒತ್ತಾಯಿಸಿ ವಿದ್ಯಾರ್ಥಿಗಳು ಹಾಗೂ ಪೋಷಕರು ಪ್ರತಿಭಟನೆ ನಡೆಸಿದರು.

ಸರಕಾರದ ಆದೇಶದಂತೆ ಯುಜಿಸಿಇಟಿ-2026ರ ಕೃಷಿಕರ ಕೋಟಾ ಅಭ್ಯರ್ಥಿಗಳಿಗೆ ಹಿರಿಯೂರು ತೋಟಗಾರಿಕೆ ಮಹಾವಿದ್ಯಾಲಯ ಕೇಂದ್ರದಲ್ಲಿ ಸೋಮವಾರ ಮರು ಪರೀಕ್ಷೆ ಆಯೋಜಿಸಲಾಗಿತ್ತು. ಬೆಳಗ್ಗೆ ಕೇಂದ್ರಕ್ಕೆ ಬಂದ 2,025 ವಿದ್ಯಾರ್ಥಿಗಳು ಪರೀಕ್ಷೆ ಬರೆದು ಹೊರಬಂದು 'ಪರೀಕ್ಷೆ ಚೆನ್ನಾಗಿ ಬರೆದಿಲ್ಲ' ಎಂದು ತಿಳಿಸುತ್ತಿದ್ದಂತೆ ಆತಂಕಗೊಂಡ ಪೋಷಕರು, ಪ್ರತಿಭಟನೆ ಆರಂಭಿಸಿದರು.

''ಪ್ರಶ್ನೆಪತ್ರಿಕೆ ಕಠಿಣವಾಗಿದ್ದು ಸಾಕಷ್ಟು ಗೊಂದಲಗಳಿವೆ, ಮಕ್ಕಳಿಗೆ ಕಷ್ಟವಾಗಿದೆ. ಹಳೆಯ ಪ್ರವೇಶ ಪತ್ರದಲ್ಲೇ ಮರು ಪರೀಕ್ಷೆ ನಡೆಸುತ್ತಿರುವ ಉದ್ದೇಶ ಏನು? ಈ ಕೇಂದ್ರಕ್ಕೆ ಮಾತ್ರವೇ ಮರುಪರೀಕ್ಷೆ ಏಕೆ? ರಾಜ್ಯದ 17 ಕೇಂದ್ರದಲ್ಲಿ ನಡೆಯದ ನಕಲು ಇಲ್ಲಿಯೇ ಏಕೆ ನಡೆಯಿತು? ನಕಲು ಆಗಿರುವ ಬಗ್ಗೆ ತನಿಖೆ ನಡೆದಿದೆಯೇ? ಮಕ್ಕಳ ಬದುಕಿನ ಜತೆ ಚೆಲ್ಲಾಟವಾಡುತ್ತಿದ್ದೀರಾ? ಮಕ್ಕಳು ಓದಿ ಹೆಚ್ಚು ಅಂಕ ಗಳಿಸಿದರೆ ಅದು ನಕಲು ಹೇಗೆ ಆಗುತ್ತದೆ,'' ಎಂದು ಪೋಷಕರು ಪ್ರಶ್ನೆಗಳ ಸುರಿಮಳೆಗೈದರು.

ಆಕ್ರೋಶಗೊಂಡ ಪೋಷಕರು, ಕಾಲೇಜು ಆವರಣದಲ್ಲಿನ ಹೂವಿನ ಕುಂಡಗಳು, ಕಟಕಿಯ ಗ್ಲಾಸ್ ಒಡೆದು ಹಾಕಿದರು. ಬಾಗಿಲು ತೆಗೆದು ಪರೀಕ್ಷಾ ಕೇಂದ್ರದೊಳಗೆ ನುಗ್ಗಲು ಯತ್ನಿಸಿದರು. ಸ್ಥಳಕ್ಕಾಗಮಿಸಿದ ಪೊಲೀಸರು, ಪೋಷಕರನ್ನು ಕೇಂದ್ರದಿಂದ ಹೊರಗೆ ಕಳುಹಿಸಿದರು.

ಡಿವೈಎಸ್‌ಪಿ ಶಿವಕುಮಾರ್ ಹಾಗೂ ಎಸ್‌ಬಿ ಗುಡ್ಡಪ್ಪ ನೇತೃತ್ವದ ಪೊಲೀಸರು, ಪ್ರತಿಭಟನಾನಿರತರ ಮನವೊಲಿಸಲು ಹರಸಾಹಸಪಟ್ಟರು. ತಹಸೀಲ್ದಾರ್ ಎಂ.ಸಿದ್ದೇಶ್ ಹಾಗೂ ಎಎಸ್‌ಪಿ ಶಿವಕುಮಾರ್ ಕೂಡ ಮನವೊಲಿಸಲು ಪ್ರಯತ್ನಿಸಿದರು.

ಬಬ್ಬೂರು ಫಾರಂ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ಮೇ 10ರಂದು ಕೃಷಿ ಪ್ರಾಯೋಗಿಕ ಪರೀಕ್ಷೆ ಬರೆದಿದ್ದ 2,090 ವಿದ್ಯಾರ್ಥಿಗಳಲ್ಲಿ 74 ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕಗಳಿಸಿದ್ದು ಅನುಮಾನಕ್ಕೆ ಎಡೆಮಾಡಿಕೊಟ್ಟಿತ್ತು, ಹೀಗಾಗಿ ಸೋಮವಾರ ಮರುಪರೀಕ್ಷೆ ನಡೆಯಿತು.



ಹಿರಿಯೂರು ತಾಲೂಕು ಬಬ್ಬೂರು ಫಾರಂ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ಸೋಮವಾರ ನಡೆದ ಕೃಷಿ ಪ್ರಾಯೋಗಿಕ ಮರು ಪರೀಕ್ಷೆ ರದ್ದುಪಡಿಸಲು ಆಗ್ರಹಿಸಿ ಪೋಷಕರು ಪ್ರತಿಭಟನೆ ನಡೆಸಿದರು.

ನಾವು ಹುಳಿಯಾರಿನಿಂದ ಬೆಳಗ್ಗೆ ಮಳೆಯಲ್ಲಿ ನೆನೆದುಕೊಂಡು ಬಂದಿದ್ದೇವೆ. 74 ಮಕ್ಕಳು ಪೂರ್ಣ ಅಂಕ ಗಳಿಸುವುದು ತಪ್ಪಾ? ನಿಖರ ದಾಖಲೆಯಿಲ್ಲದೇ ಮರು ಪರೀಕ್ಷೆ ನಡೆಸುವುದು ಖಂಡನೀಯ. ಇದನ್ನು ಕೇಳಬೇಕಾದ ಜನಪ್ರತಿನಿಧಿಗಳು ಎಲ್ಲಿದ್ದಾರೆ? ನಕಲು ಆಗಿದ್ದರೆ ಸಿಸಿಟಿವಿ ದೃಶ್ಯಗಳನ್ನು ಪರೀಶಿಲನೆ ನಡೆಸಬೇಕಿತ್ತು. ರೈತರ ಮಕ್ಕಳಿಗೆ ನ್ಯಾಯ ಒದಗಿಸಿ.

-ಮೋಹನ್ ಕುಮಾರ್
ತೊರೆಸೊರೆಗೊಂಡನಹಳ್ಳಿ

ಇವತ್ತಿನ ಪ್ರಶ್ನೆಪತ್ರಿಕೆ ಕಠಿಣವಾಗಿತ್ತು, ಗೊಂದಲಗಳಿದ್ದವು. ಓದಿದ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಗಳೇ ಇರಲಿಲ್ಲ. ನೀಟ್ ಮಾದರಿಯಲ್ಲಿ ರಾಜ್ಯಾದ್ಯಂತ ಮರು ಪರೀಕ್ಷೆ ಮಾಡಬೇಕಿತ್ತು, ಒಂದೇ ಕೇಂದ್ರದಲ್ಲಿ ಪರೀಕ್ಷೆ ನಡೆಸಿರುವುದರಿಂದ ಈ ಭಾಗದ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ.

-ಸಂಜನಾ ಪರೀಕ್ಷೆ ಬರೆದ ವಿದ್ಯಾರ್ಥಿನಿ

V-karnataka pg 08

Litchi to mango, how fruits are falling prey to changing weather

Madan Kumar, Sandip Dighe, Tushar Pawar & Rohit Mullick | TNN

Unseasonal rain, hailstorms and heatwaves during April-May have adversely impacted fruit crops across the country. From Bihar to Maharashtra, TOI visits orchards to assess the extent of damage and its economic cost

Every year in Muzaffarpur, the summer's oppressive heat brings with it the heavy, sweet scent of ripening fruit that fills the air. The pale pink ping pong ball-shaped fruit holds the promise of succulent, sweet flesh and juicy satisfaction. But this year, the smell of damp earth and rotting hangs across orchards in this Bihar district that's famous the world over for its 'Shahi' litchi.

"When you walk into the orchard during litchi season, you can hear the call of birds and buzz of bees," says 40-year-old Jitu Paswan, treading on a carpet of thousands of blackened, half-ripe fruits. "This year, you can hear the clicking sound of millions of bugs crawling over the bark. If you shake a branch, they drop on your head and spray a foul, burning liquid that stains your skin and stings your eyes." This almost dystopian scene has been caused by the combination of unseasonal rain in the last two months and the attack of the 'stink bug' pest.

Last year, Paswan was able to use earnings from the harvest to pay for a daughter's school fees and wedding expenses for another daughter. This year, he has nothing. Paswan is not alone. Scientists estimate that nearly 70% of Bihar's litchi crop has been wiped out this year.



Intense heat, followed by rain and hailstorms in April and May, created the ideal breeding ground for an aggressive, full-blown epidemic of the litchi stink bug this year in Bihar's Muzaffarpur

Changing Weather

Unseasonal rain, hailstorms and heatwaves during April-May have adversely impacted fruit crops across the country, putting in jeopardy thousands of farmers and farm incomes. Besides litchi, apples, mangoes, grapes and bananas have been badly hit. The damage is only compounded by the fact that horticulture farming is capital-intensive and a far riskier endeavour than typical cropping.

Ramchandra Sable, a Maharashtra-based agrometeorologist, says rising temperatures and erratic rainfall are disrupting delicate crop stages such as flowering, pollination and fruit development. Fruit crops are highly climate-sensitive because their reproductive phases depend on stable temperature and humidity conditions, he says.

"Mangoes require specific winter conditions for proper flowering. Grapes need dry weather during maturity. Bananas are vulnerable to wind and excess moisture. What we are seeing now is increased climate variability, sudden rain events, hailstorms, heat stress and prolonged humidity, all within short periods," he added.

Litchi Reports A Bug

Climate change has severely crippled production of Bihar's iconic, GI-tagged Shahi litchi. The delicate, subtropical fruit demands strict microclimatic conditions to thrive, but erratic weather cycles have triggered crop losses. ICAR-Central Institute for Subtropical Horticulture director T Damodaran says that India's litchi production is expected to go down by 40% because of crop loss in Bihar.

Scientists working at ICAR-National Research Centre on Litchi (NRCL), Muzaffarpur, say unseasonal rain, dense cloud cover, and severe hailstorms destroyed what was left of the delicate blossoms (manjar) and young fruits. Temperatures breached 38°C in April and May, causing massive, premature fruit drop. Intense heat coupled with dry westerly winds blackened the skin, dried up the succulent pulp, and cracked the fruit before it could mature. Then came the rain and hailstorm of April and May. The moisture and sudden heat created a perfect, suffocating greenhouse effect — the ideal breeding ground for an aggressive, full-blown epidemic of the litchi stink bug.

While the stink bug is a known pest, its numbers this year grew beyond anything local scientists or farmers had ever recorded. Deprived of nutrients, litchis drop to the ground long before they can ripen. Those that manage to stay on the branch become stained, bitter, and unfit for sale.

Multiple Crises Hit Mango

Summer once meant certainty in the orchards across Maharashtra. Mango trees in Konkan would bend under the weight of the Alphonso fruit, banana growers in Jalgaon would ready truckloads for markets across north India, and vineyards in Nashik would race against time to meet export deadlines.

This year, many farmers say the season instilled fear and unease. Agriculture department studies showed widespread losses in north Maharashtra, especially in Nashik and Dhule districts, while mango growers in Konkan reported one of the weakest harvests in recent years. In the Konkan belt, Alphonso farmers say flowering patterns have become erratic due to warmer winters, while unseasonal rain and humidity trigger fungal attacks and fruit drop.

Flagging erratic growth, Ramesh Parab, a mango grower from Ratnagiri, said, "Flowering comes early in some patches and late in others. Then, rain arrives during fruit setting and the tiny mangoes fall to the ground. We have seen three difficult years on the trot."

Maharashtra's Alphonso output reported a sharp decline this season because of prolonged cloud cover, pest attacks and erratic weather, according to growers and officials.

Banana Comes A Cropper

Jalgaon, the banana capital of India because of its export-quality fruit, reported similar distress after strong winds and heavy rain flattened plantations. Strong winds toppled entire rows overnight and lakhs of rupees spent on drip irrigation, tissue culture plants and fertilisers were wasted. "Banks still want repayment and so do the input companies. But the crop is lying ruined on the ground," Patil added. He said climate-related losses are now becoming more regular than rare. "Earlier, extreme weather happened once every five or six years. Now, every season brings new shocks. We farm under tension every single day," he added.






The mango crop in Maharashtra's Ratnagiri was affected by unseasonal rain this year


File photo of bananas on a farm near Nagpur affected by heat stress

Grape Takes A Tumble

The grape industry, too, is in the throes of a severe crisis with production dropping by nearly 50% from 36 lakh tonnes in 2024-25 (Nov-April) grape season to 19.3 lakh tonnes in 2025-26. The steepest decline of 70% in grape production was in Nashik district, from 15.8 lakh tonnes last year to merely 5.3 lakh tonnes this year. Sangli district witnessed a 60% drop and Pune region reported a 30% fall.

According to Kailas Bhosle, president of the grape growers' association, continuous rainfall from May last year till mid-Oct affected the flowering and fruiting stages in vineyards. Balasaheb Palve, a grape farmer from Velapur village in Niphad taluka, said his four-acre vineyard did not produce any fruit this season.

"Earlier, each plant used to produce around 34-35 bunches, but this time it yielded only three to four. I finally uprooted the vineyard on four acres in early Nov and sowed maize. However, that too failed. I got low prices for the grapes and could not recover my expenses," he added. He is struggling with a Rs 15 lakh bank loan and has borrowed Rs 12-13 lakh from friends and relatives.

"Summer was when [illegible] and cleared our debts," said progressive farmer Suresh Jadhav from Niphad in Nashik district. "This year, hail hit my vineyard just before harvesting. Nearly half the bunches cracked or developed fungus after rain. Export agents rejected the crop, saying it was not fit for Europe. One unseasonal spell of rain is enough to destroy an entire year of work," he added.

Apple On Red Alert

Up north, Himachal Pradesh looks headed for one of its worst apple seasons, with farmers reporting up to 70% losses due to prolonged erratic weather. "It's unprecedented," said Harish Chauhan, president of the Fruits, Vegetables and Flowers Growers Association, adding, "Our estimates suggest an overall loss of up to 70% in the state's major apple belts. The state's apple economy could shrink from Rs 5,000-6,000 crore to just Rs 1,500-2,000 crore this season."

A combination of inadequate chilling hours, sharp temperature fluctuations, frost, hailstorms, and untimely rainfall has ravaged orchards in Kullu, Shimla, Kinnaur, and parts of Mandi. These conditions have severely disrupted the critical stages of flowering, pollination, and fruit setting.

While the higher reaches, such as Kinnaur, have fared relatively better, mid and lower elevations have witnessed extensive damage, reaching 80% in some areas. Traditional varieties such as Royal Delicious and Red Delicious are among the worst hit.

Weather conditions have been unfavourable since winter. "Apple orchards did not receive the requisite chilling hours due to delayed and comparatively less snowfall, affecting bud development and fruit-setting cycle. And, in the peak apple flowering season in March, the weather took a sharp turn," Chauhan says. According to the Shimla Met office, heatwaves scrambled the first fortnight of March in Kullu, Mandi and Sirmaur, and then cold weather struck after March 15 due to snowfall in parts of Kullu, Mandi, Lahaul-Spiti, Chamba and Kinnaur districts.

Horticulture expert Gurmohinder Singh Kotia, who runs an apple nursery in Kullu, said the [illegible] temperature is 15-22 °C, but March saw wild fluctuations — spikes of 30°C and slumps of 10°C.

Bleak Future

Adaptation, rather than short-term compensation, will determine whether fruit farming remains viable. Scientists say that India needs climate-resilient farming strategies and horticulture planning must be redesigned around climate realities.

This includes weather-resilient crop varieties, protective netting, micro-irrigation, better drainage systems, real-time weather advisories and stronger crop insurance coverage. Farmers also need access to decentralised cold storage and processing units so damaged produce can still generate some income.

ICAR's Damodaran says studies have shown how techniques like cluster spraying and lowering canopy size have been effective in combating the stink bug on the litchi fruit.

In his Muzaffarpur orchard, litchi farmer Krishna Murari picks up a fallen, half-eaten litchi and gently cracks open the leathery skin. Inside, a small pocket of translucent white flesh remains untouched by the rot. He puts it in his mouth. The legendary sweetness is still there, sharp and vibrant, a stubborn reminder of what his land can produce.

Adapting To Climate Change

- India is developing HRMN-99, Anna, and Golden Dorset for apples and Arka Udaya and Arka Suprabhath as varieties of mango. These crops can cope with unpredictable weather and boost farm productivity
- In the last decade Indian Council of Agricultural Research has released 2,177 crop varieties targeting various abiotic stresses like soil salinity and phosphorus, submergence in flood-prone areas, drought, heat and adaptability to late agricultural rainfed sowing cycles

Betting On Resilient Fruits

Dragon fruit | Grown in water-scarce regions of India (such as Andhra and Telangana), Southeast Asia, and Mexico

Indian jujube/ber | Grown in arid, semi-arid desert zones of sub-Saharan Africa, West Asia, north-west India (specifically Rajasthan)

Garnacha/carignan variety of grapes | This heat resistant fruit is grown in Europe (Spain, Italy, and southern France), California, and parts of Australia

INCREASING OUTPUT AMPLIFIES RISK TO FARM INCOMES

Production of fruits like banana, mango and grapes have risen dramatically, which means the exposure to damage is that much higher now



Hosadiganta pg 10

Times of Ind pg 10

Kannadaprabha Pg 06

ಜೈವಿಕ ತಂತ್ರಜ್ಞಾನ–ವಿಜ್ಞಾನ, ಸಂಶೋಧನೆ, ಔಷಧಿ ಉತ್ಪಾದನೆ, ಕ್ಲಿನಿಕಲ್ ರಿಸರ್ಚ್, ಯಶಸ್ಸಿನ ಸಂಗಮ

ಭವಿಷ್ಯ ಗೆಲ್ಲುವ, ಉದ್ಯೋಗಾವಕಾಶದ ಬಯೋಟೆಕ್ನಾಲಜಿ



ಡಾ। ರಂಗಸ್ವಾಮಿ ಬಿ.ಇ.
ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ, ದಾವಣಗೆರೆ.



ಡಾ। ವಾಸುದೇವ ನಾಯಕ ಕೆ.ಬಿ.ಎಲ್.
ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ, ದಾವಣಗೆರೆ.

ಜೈವಿಕ ತಂತ್ರಜ್ಞಾನವನ್ನು ಪದವಿ ಮಟ್ಟದಲ್ಲಿ ಆಯ್ಕೆ ಮಾಡುವ ಪ್ರಮುಖ ಲಾಭವೆಂದರೆ, ಇದರಲ್ಲಿರುವ ವ್ಯಾಪಕ ಉದ್ಯೋಗಾವಕಾಶ.

ಜೈವಿಕ ತಂತ್ರಜ್ಞಾನವು (Biotechnology) 21ನೇ ಶತಮಾನದಲ್ಲಿ ಅತ್ಯಂತ ಚುರುಕು ಮತ್ತು ಅಂತರವಿಷಯಕ (interdisciplinary) ಕ್ಷೇತ್ರಗಳಲ್ಲಿ ಒಂದಾಗಿ ಹೊರಹೊಮ್ಮಿದೆ. ಪದವಿ ಮಟ್ಟದಲ್ಲಿ (Undergraduate course) ಜೈವಿಕ ತಂತ್ರಜ್ಞಾನವು ಜೀವಶಾಸ್ತ್ರ, ರಸಾಯನಶಾಸ್ತ್ರ, ಭೌತಶಾಸ್ತ್ರ ಮತ್ತು ಎಂಜಿನಿಯರಿಂಗ್ ತತ್ವಗಳನ್ನು ಸಂಯೋಜಿಸಿ ಸ್ವಜ ಜೀವನದ ಸಮಸ್ಯೆಗಳಿಗೆನವೀನಪರಿಹಾರಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ. ಆರೋಗ್ಯ ಸೇವೆ, ಕೃಷಿ, ಪರಿಸರ ಸಂರಕ್ಷಣೆ ಮತ್ತು ಕೈಗಾರಿಕಾ ಪ್ರಕ್ರಿಯೆಗಳಲ್ಲಿವೇಗವಾಗಿನಡೆಯುತ್ತಿರುವ ಅಭಿವೃದ್ಧಿಗಳ ಹಿನ್ನೆಲೆಯಲ್ಲಿ ಜೈವಿಕ ತಂತ್ರಜ್ಞಾನ ವಿಶಿಷ್ಟಕೌಶಲ್ಯ ಆಧಾರಿತ ಪದವಿಗಳಿಗೆ ಬೇಡಿಕೆ ಉತ್ತಮವಾಗಿ ಬೆಳೆದಿದೆ. ಇದು ಉತ್ತಮ ವೃತ್ತಿ ಅವಕಾಶಗಳನ್ನು ಒದಗಿಸುತ್ತಿರುವ ಆಧುನಿಕ ಪದವಿಗಳಲ್ಲಿ ಒಂದಾಗಿದೆ.

ಸೈದ್ಧಾಂತಿಕ ಜ್ಞಾನ ಬೆಳವಣಿಗೆ

ಪದವಿ ಮಟ್ಟದಲ್ಲಿ (B.Sc. ಅಥವಾ B.Tech Biotechnology) ವಿದ್ಯಾರ್ಥಿಗಳು ಮೂಲಭೂತ ವಿಷಯಗಳಾದ ಆಣುಜೀವಶಾಸ್ತ್ರ (Molecular Biology), ವಂಶವಾಹಕಶಾಸ್ತ್ರ (Genetics), ಜೀವ ರಾಸಾಯನಶಾಸ್ತ್ರ (Biochemistry), ಸೂಕ್ಷ್ಮಜೀವಶಾಸ್ತ್ರ (Microbiology), ರೋಗ ನಿರೋಧಕಶಾಸ್ತ್ರ (Immunology) ಮತ್ತು ಬಯೋಇನ್‌ಫರ್ಮಾಯಿಟಿಕ್ಸ್ (Bioinformatics) ಗಳನ್ನು ಅಧ್ಯಯನ ಮಾಡುತ್ತಾರೆ. ಈ ಕೋರ್ಸ್ ವಿದ್ಯಾರ್ಥಿಗಳಲ್ಲಿ ಸೈದ್ಧಾಂತಿಕಜ್ಞಾನ ಮತ್ತು ಪ್ರಯೋಗಾಲಯ ಕೌಶಲ್ಯಗಳನ್ನು ಬೆಳೆಸಲು ವಿನ್ಯಾಸಗೊಳಿಸಲಾಗಿದೆ. ಪಿಸಿಆರ್, ಡಿಎನ್‌ಎ ಕ್ರಮವಿನ್ಯಾಸ (Sequencing), ಫರ್ಮೆಂಟೇಷನ್ ತಂತ್ರಜ್ಞಾನ ಮತ್ತು ಕೋಶ ಸಂಸ್ಕೃತಿ (Cell culture) ಮುಂತಾದ ಆಧುನಿಕ ತಂತ್ರಗಳನ್ನು ಕಲಿಸಲಾಗುತ್ತದೆ. ಇವು ಸಂಶೋಧನೆ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಅತ್ಯಂತ ಅಗತ್ಯವಾಗಿವೆ. ಜೈವಿಕ ತಂತ್ರಜ್ಞಾನವು ಒಂದು ಕ್ಷೇತ್ರಕ್ಕೆ ಸೀಮಿತವಾಗಿದೆ, ಹಲವು ವಿಜ್ಞಾನ ಶಾಖೆಗಳನ್ನು ಒಟ್ಟುಗೂಡಿಸುವುದರಿಂದ ವಿದ್ಯಾರ್ಥಿಗಳಿಗೆ ವಿಶಾಲ ಜ್ಞಾನ ಮತ್ತು ವಿವಿಧ ವೃತ್ತಿ ಮಾರ್ಗಗಳನ್ನು ಒದಗಿಸುತ್ತದೆ.

ಜೈವಿಕ ತಂತ್ರಜ್ಞಾನವನ್ನು ಪದವಿ ಮಟ್ಟದಲ್ಲಿ ಆಯ್ಕೆ ಮಾಡುವ ಪ್ರಮುಖ ಲಾಭವೆಂದರೆ, ಇದರಲ್ಲಿರುವ ವ್ಯಾಪಕ ಉದ್ಯೋಗಾವಕಾಶಗಳು. ಜೈವಿಕ ತಂತ್ರಜ್ಞಾನ ಪದವೀಧರರು ಆರೋಗ್ಯ ಸೇವೆ, ಔಷಧೋದ್ಯಮ, ಕೃಷಿ, ಆಹಾರ ತಂತ್ರಜ್ಞಾನ, ಪರಿಸರ ನಿರ್ವಹಣೆ ಮತ್ತು ಜೈವಿಕಉಪಾಧ್ಯಾಸ್ತ್ರ ಕ್ಷೇತ್ರಗಳಲ್ಲಿ ಕೆಲಸ ಮಾಡಬಹುದು. ಆರೋಗ್ಯ ಕ್ಷೇತ್ರದಲ್ಲಿ ಔಷಧದ ಅಭಿವೃದ್ಧಿ, ಲಸಿಕೆ ತಯಾರಿಕೆ, ರೋಗ ನಿರ್ಣಯತಂತ್ರಗಳು ಮತ್ತು ಜೀನ್ ಆಧಾರಿತ ವಂಶವಾಹಕ ಚಿಕಿತ್ಸೆ (Gene therapy) ಗಳಲ್ಲಿ ಪಾಲ್ಗೊಳ್ಳಬಹುದು. ಜೀನ್ ರಕ್ಷಕ ಔಷಧಿಗಳು ಮತ್ತು ವೈಯಕ್ತಿಕ ಚಿಕಿತ್ಸಾ ವಿಧಾನಗಳ ಅಭಿವೃದ್ಧಿಯಲ್ಲಿ ಜೈವಿಕ ತಂತ್ರಜ್ಞಾನವು ಮಹತ್ವದ ಪಾತ್ರ ವಹಿಸುತ್ತದೆ.

ಔಷಧೋದ್ಯಮ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಜೈವಿಕ ತಂತ್ರಜ್ಞಾನ ತಜ್ಞರು ಸಂಶೋಧನೆ ಮತ್ತು ಅಭಿವೃದ್ಧಿ (ಆರ್ ಆ್ಯಂಡ್ ಡಿ), ಗುಣಮಟ್ಟ ನಿಯಂತ್ರಣ, ನಿಯಂತ್ರಣ ವ್ಯವಹಾರಗಳು (Regulatory affairs) ಮತ್ತು ಉತ್ಪಾದನೆಯಲ್ಲಿ ಕೆಲಸ ಮಾಡುತ್ತಾರೆ. ಬಯೋಕಾನ್, ಸರೂ ಇನ್‌ಸ್ಟಿಟ್ಯೂಟ್ ಮುಂತಾದ ಕಂಪನಿಗಳು ಔಷಧ ಕಂಡುಹಿಡಿಯುವಿಕೆ ಮತ್ತು ಉತ್ಪಾದನೆಯಲ್ಲಿ ಅವಕಾಶಗಳನ್ನು ಒದಗಿಸುತ್ತವೆ. ಇದಲ್ಲದೆ, ಕ್ಲಿನಿಕಲ್ ರಿಸರ್ಚ್ ಆಸೋಸಿಯೇಟ್, ಗುಣಮಟ್ಟ ವಿಶ್ಲೇಷಣೆ ಆಥವಾ ಉತ್ಪಾದನಾ ನಿರ್ವಾಹಕರಾಗಿ ಕೆಲಸ ಮಾಡಬಹುದು.



ಕೃಷಿ ತಂತ್ರಜ್ಞಾನದಲ್ಲಿ ಅವಕಾಶ

ಕೃಷಿ ಜೈವಿಕ ತಂತ್ರಜ್ಞಾನವು ಮತ್ತೊಂದು ಪ್ರಮುಖ ಕ್ಷೇತ್ರವಾಗಿದೆ. ಇದು ಬೆಳೆ ಉತ್ಪಾದನೆ ಹೆಚ್ಚಿಸುವುದು, ಕೀಟ ನಿರೋಧಕತೆ ಮತ್ತು ಹವಾಮಾನ ಸಹನಶೀಲತೆಯನ್ನು ಹೆಚ್ಚಿಸಲು ಜನನ ತಂತ್ರಜ್ಞಾನ ಮತ್ತು ಟಿಷ್ಯೂ ಕಲ್ಚರ್‌ವಿಧಾನಗಳನ್ನು ಬಳಸುತ್ತದೆ. ಭಾರತದಂಥ ಕೃಷಿ ಪ್ರಧಾನ ದೇಶಗಳಿಗೆ ಇದು ಅತ್ಯಂತ ಉಪಯುಕ್ತವಾಗಿದೆ. ಪರಿಸರ ಜೈವಿಕ ತಂತ್ರಜ್ಞಾನವು ತ್ಯಾಜ್ಯ ನಿರ್ವಹಣೆ, ಮಾಲಿನ್ಯ ನಿಯಂತ್ರಣ ಮತ್ತು ಪರಿಸರ ಸ್ನೇಹಿ ತಂತ್ರಜ್ಞಾನಗಳ ಮೂಲಕ ಸುಸ್ಥಿರ ಅಭಿವೃದ್ಧಿಗೆ ನೆರವಾಗುತ್ತದೆ.

ಉದ್ಯಮಗಳ ಜೊತೆಗೆ, ಜೈವಿಕ ತಂತ್ರಜ್ಞಾನ ಪದವೀಧರರು ಸಂಶೋಧಕರ ಮತ್ತು ಅಧ್ಯಾಪನ ಕ್ಷೇತ್ರಗಳಲ್ಲಿ ಸಹ ವೃತ್ತಿ ನಿರ್ವಹಿಸಬಹುದು. ಆಕ್ಸಿಅಕ್ಸ ಎಂಎಸ್, ಎಂ.ಟೆಕ್ ಅಥವಾ ಪಿಎಚ್.ಡಿ ಮಾಡುವ ಅಭಿಲಾಷೆಯನ್ನು ಜನಸಾಮಾನ್ಯ ಅಥವಾ ಜೈವಿಕ ಸಂಖ್ಯಾಶಾಸ್ತ್ರದಲ್ಲಿ ಪರಿಣತಿ ಪಡೆಯಬಹುದು. ಸರ್ಕಾರದ ಸಂಸ್ಥೆಗಳು, ಸಂಶೋಧನಾಕೇಂದ್ರಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಕೆಲಸ ಮಾಡುವ ಅವಕಾಶಗಳಿವೆ. ಭಾರತದಲ್ಲಿ ಡಿಬಿಟಿ, ಸಿಎಸ್‌ಐಆರ್ ಮತ್ತು ಐಸಿಎಂಆರ್ ಮುಂತಾದ ಸಂಸ್ಥೆಗಳು ಸಂಶೋಧನೆಗೆ ಉತ್ತೇಜನ ನೀಡುತ್ತವೆ.

ಉದ್ಯಮಶೀಲತೆ (Entrepreneurship) ಕೂಡ ಜೈವಿಕ ತಂತ್ರಜ್ಞಾನದಲ್ಲಿ ಬೆಳೆಯುತ್ತಿರುವ ಕ್ಷೇತ್ರವಾಗಿದೆ. ಸರ್ಕಾರದ ಬೆಂಬಲ ಮತ್ತು ಸ್ಟಾರ್ಟ್‌ಅಪ್ ಪರಿಸರದ ಬೆಳವಣಿಗೆಯಿಂದಾಗಿ, ವಿದ್ಯಾರ್ಥಿಗಳು ಡಯಗ್ನೋಸ್ಟಿಕ್ ಲ್ಯಾಬ್‌ಗಳು, ಜೈವಿಕ ರಸಗೊಬ್ಬರಗಳು, ಪಶುಪಾಲ್ಯ ಉತ್ಪನ್ನಗಳು ಮತ್ತು ಜೈವಿಕಉಪಾಧ್ಯಾಸ್ತ್ರ ಸೇವೆಗಳ ಕ್ಷೇತ್ರಗಳಲ್ಲಿ ತಮ್ಮದೇ ಉದ್ಯಮಗಳನ್ನು ಪ್ರಾರಂಭಿಸಬಹುದು.

ಪ್ರಸ್ತುತ ಸಂಶೋಧನಾ ಕ್ಷೇತ್ರದ ದೃಷ್ಟಿಯಿಂದ, ಜೈವಿಕ ತಂತ್ರಜ್ಞಾನವು ವೈದ್ಯಾನಿಕ ಪ್ರಗತಿಯ ಮುಂಚೂಣಿಯಲ್ಲಿದೆ. ಜೀನ್ ಎಡಿಟಿಂಗ್ (CRISPR), ಸಿಂಥೆಟಿಕ್ ಬಯಾಲಜಿ, ಪುನರುತ್ಪಾದಕ ವೈದ್ಯಕೀಯ (Regenerative medicine), ನ್ಯಾನೋ ಬಯೋಟೆಕ್ನಾಲಜಿ ಮತ್ತು ಕೃತಕ ಬುದ್ಧಿಮತ್ತೆ ಆಧಾರಿತ ಔಷಧ ಅಭಿವೃದ್ಧಿ ಕ್ಷೇತ್ರಗಳು ವೇಗವಾಗಿ ಬೆಳೆಯುತ್ತಿವೆ. ಜೀನ್ ಥೆರಪಿ ಮತ್ತು ಕೋಶ ಆಧಾರಿತ ಚಿಕಿತ್ಸೆಗಳು ಜಲವಾರು ಕಾಯಿಲೆಗಳ ಚಿಕಿತ್ಸೆಯಲ್ಲಿ ಕ್ರಾಂತಿ ತಂದಿವೆ.

ಡಾಟಾ ವಿಶ್ಲೇಷಣೆಗೆ ಸಹಾಯಕ

ಬಯೋಇನ್‌ಫರ್ಮಾಯಿಟಿಕ್ಸ್ (Bioinformatics) ಕೂಡ ವೇಗವಾಗಿ ಬೆಳೆಯುತ್ತಿರುವ ಕ್ಷೇತ್ರವಾಗಿದೆ. ಇದು ಜೀವಶಾಸ್ತ್ರ ಮತ್ತು ಗಣಕ ತಂತ್ರಜ್ಞಾನವನ್ನು ಸಂಯೋಜಿಸಿ ದೊಡ್ಡ ಪ್ರಮಾಣದ ಡೇಟಾವನ್ನು ವಿಶ್ಲೇಷಿಸಲು ಸಹಾಯ ಮಾಡುತ್ತದೆ. ಜೀನೋಮಿಕ್ ಮತ್ತು ವೈಯಕ್ತಿಕ ಚಿಕಿತ್ಸೆಯ ಬೆಳವಣಿಗೆಯಿಂದಾಗಿ, ಈ ಕ್ಷೇತ್ರದಲ್ಲಿ ತಜ್ಞರ ಬೇಡಿಕೆ ಹೆಚ್ಚುತ್ತಿದೆ. ಕೈಗಾರಿಕಾ ಜೈವಿಕ ತಂತ್ರಜ್ಞಾನವು ಬಯೋಪ್ಲಾಸ್ಟಿಕ್, ಬಯೋಇಂಧನಗಳು ಮತ್ತು ಹಸಿರು ರಾಸಾಯನಶಾಸ್ತ್ರದ ಮೂಲಕ ಪರಿಸರ ಸಮಸ್ಯೆಗಳಿಗೆ ಪರಿಹಾರಗಳನ್ನು ಒದಗಿಸುತ್ತಿದೆ.

ಜಾಗತಿಕ ಮಟ್ಟದಲ್ಲಿ ಜೈವಿಕ ತಂತ್ರಜ್ಞಾನ ಕ್ಷೇತ್ರವು ವೇಗವಾಗಿ ವಿಸ್ತರಿಸುತ್ತಿದೆ ಮತ್ತು ಪರಿಣತರಿಗೆ ಬೇಡಿಕೆ ಹೆಚ್ಚುತ್ತಿದೆ. ಭಾರತದಲ್ಲಿ 'ಮೇಕ್ ಇನ್ ಇಂಡಿಯಾ' ಮುಂತಾದ ಯೋಜನೆಗಳು ಮತ್ತು ಸಂಶೋಧನೆಗೆ ಹೂಡಿಕೆಗಳು ಈ ಕ್ಷೇತ್ರದ ಬೆಳವಣಿಗೆಗೆ ನೆರವಾಗುತ್ತಿದೆ. ಇದರಿಂದ ಭವಿಷ್ಯದಲ್ಲಿ ಉತ್ತಮ ಅವಕಾಶಗಳು ಲಭ್ಯವಾಗಲಿವೆ. ಆದರೆ, ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಹೆಚ್ಚಿನ ಮಟ್ಟದ ವೃತ್ತಿ ಬೆಳವಣಿಗೆಗೆ ಹೆಚ್ಚಿನ ವಿಶ್ಲೇಷಣಾ ಮತ್ತು ಪರಿಣತಿ ಅಗತ್ಯವಿರುತ್ತದೆ. ಪದವಿ ನಂತರ ಪ್ರಾರಂಭಿಕ ಉದ್ಯೋಗಗಳು ಲಭ್ಯವಿದ್ದರೂ, ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರದಲ್ಲಿ ಮುಂದ್ದಲೆಯಲು ಸ್ನಾತಕೋತ್ತರ ಮತ್ತು ಪಿಎಚ್.ಡಿ ಅಗತ್ಯವಾಗುವುದು ಆದ್ದರಿಂದ, ಈ ಕ್ಷೇತ್ರದಲ್ಲಿ ಯಶಸ್ಸು ಪಡೆಯಲು ನಿರಂತರ ಅಧ್ಯಯನ ಮತ್ತು ಕೌಶಲ್ಯಾಭಿವೃದ್ಧಿ ಅಗತ್ಯ.

ಸಾರಾಂಶವಾಗಿ, ಜೈವಿಕ ತಂತ್ರಜ್ಞಾನ ಪದವಿ ಕೋರ್ಸ್ ವಿದ್ಯಾರ್ಥಿಗಳಿಗೆ ಬಲವಾದ ನೆಲೆ ಮತ್ತು ಬಹುಮುಖ ವೃತ್ತಿ ಅವಕಾಶಗಳನ್ನು ಒದಗಿಸುತ್ತದೆ. ವಿಜ್ಞಾನ, ಕೈಗಾರಿಕೆಗಳಲ್ಲಿ ಉದ್ಯೋಗಾವಕಾಶಗಳು ಮತ್ತು ವಿಸ್ತಾರವಾದ ಸಂಶೋಧನಾ ಅವಕಾಶಗಳೊಂದಿಗೆ, ಇದು ಭವಿಷ್ಯದಲ್ಲಿ ಆಸಕ್ತ ಭವಮಸೆಯ ಕ್ಷೇತ್ರವಾಗಿದೆ. ವಿಜ್ಞಾನ, ನವೀನತೆ ಮತ್ತು ಸಮಾಜದ ಸಮಸ್ಯೆಗಳಿಗೆ ಪರಿಣಾಮಕಾರಿ ಪರಿಹಾರ ಕಂಡುಕೊಳ್ಳುವ ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳಿಗೆ ಜೈವಿಕ ತಂತ್ರಜ್ಞಾನವು ಯಶಸ್ವಿ ವೃತ್ತಿಯ ದಾರಿಯಾಗಿದೆ.